quickmarketreports.com Date : 07-10-2015

# ಮಹಾರಾಷ್ಟ್ರದ ಬೇಳೆಕಾಳು ಉತ್ಪಾದನೆ ಗಣನೀಯ ಇಳಿಕೆ ದರ ಇನ್ನೂ ಹೆಚ್ಚಳ ಸಾಧ್ಯತೆ

ಮಹಾರಾಷ್ಟ್ರದಲ್ಲಿ ಈ ವರ್ಷ ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಿ ಬರ ಸಮಾನ ಪರಿಸ್ಥಿತಿಯಿಂದ ಅಲ್ಲಿನ ಬೇಳೆಕಾಳು ಬೆಳೆಗಳು ತೀವ್ರ ಬಾಧಿತವಾಗಿದೆ. ಮಹಾರಾಷ್ಟ್ರ ದೇಶದ ಪ್ರಮುಖ ಆಹಾರ ಧಾನ್ಯ, ಅದರಲ್ಲಿಯೂ ಉದ್ದು ಹಾಗೂ ಹೆಸರುಕಾಳು ಬೆಳೆಯುವ ರಾಜ್ಯ. ಸರಕಾರದ ಕೃಷಿ ಡಿಪಾರ್ಟ್‌ಮೆಂಟ್‌ನ ಇತ್ತೀಚಿನ ಅಂದಾಜು ಪ್ರಕಾರ ಅಲ್ಲಿನ ಬೇಳೆಕಾಳು ಉತ್ಪಾದನೆ 49 ಶೇಕಡಾ ಇಳಿಕೆಯಾಗಬಹುದು. ಸಾಮಾನ್ಯವಾಗಿ 13.89 ಲಕ್ಷ ಟನ್ ಬೇಳೆಕಾಳು ಉತ್ಪಾದಿಸುವ ಮಹಾರಾಷ್ಟ್ರ ಈ ಬೆಳೆಯಲ್ಲಿ 7.10 ಲಕ್ಷ ಟನ್ ಉತ್ಪಾದಿಸಬಹುದೆನ್ನಲಾಗಿದೆ. ಅಲ್ಲಿನ ಒಟ್ಟು ಆಹಾರಧಾನ್ಯ ಉತ್ಪಾದನೆ 39ಶೇಕಡಾ ಇಳಿಕೆಯಾಗ ಬಹುದೆನ್ನಲಾಗಿದೆ. ಹಿರಿಯ ಕೃಷಿ ಅಧಿಕಾರಿಗಳ ಅನಿಸಿಕೆಯಂತೆ ಬೇಳೆಕಾಳು ಉತ್ಪಾದನೆಯ ಗರಿಷ್ಠ ಪ್ರಮಾಣದ ಇಳಿಕೆ ಬಳಕೆಗೆ ಬಹಳ ಕಡಿಮೆಯಾಗಬಹುದು ಮತ್ತು ದರ ಇನ್ನೂ ಹೆಚ್ಚಳವಾಗಬಹುದೆನ್ನಲಾಗಿದೆ. ಇದ್ದುದರಲ್ಲಿ ತೊಗರಿಯ ಉತ್ಪಾದನೆ ಉತ್ತಮವಾಗಿದ್ದರೂ, ಉದ್ದು, ಹೆಸರುಕಾಳು ಉತ್ಪಾದನೆ ಗರಿಷ್ಠ ಪ್ರಮಾಣದಲ್ಲಿ ಬಾಧಿತವಾಗಿದೆಯೆನ್ನಲಾಗಿದೆ. ದೇಶದ ಪ್ರಮುಖ ಉತ್ಪಾದನಾ ರಾಜ್ಯದ ಉತ್ಪಾದನೆಯ ಇಳಿಕೆ ದೇಶದ್ಯಾಂತ ಪರಿಣಾಮ ಬೀರಬಹುದೆನ್ನಲಾಗಿದೆ.

ಕೃಷಿ ವಿಭಾಗದ ಅಂದಾಜಿನಂತೆ ರಾಜ್ಯದ ಹೆಸರುಕಾಳು, ಉದ್ದು ಉತ್ಪಾದನೆ ಕ್ರಮವಾಗಿ 65 ಹಾಗೂ 75 ಶೇಕಡಾ ಇಳಿಕೆಯಾಗಬಹುದು, ಮುಸುಕಿನ ಜೋಳ ಮತ್ತು ಬಾಜ್ರಾ ಕ್ರಮವಾಗಿ 76 ಮತ್ತು 63 ಶೇಕಡಾ ಇಳಿಕೆಯಾಗಬಹುದು. ದೇಶದ್ಯಾಂತ ಮಾರುಕಟ್ಟೆಗಳಲ್ಲಿ ಬೇಳೆಕಾಳುಗಳ ಆವಕ ತೀವ್ರ ಇಳಿಕೆಯಾಗಿ ಸಾಮಾನ್ಯಕ್ಕಿಂತ 5ನೇ ಒಂದು ಭಾಗ ಮಾತ್ರವಾಗಿದೆಯೆನ್ನಲಾಗಿದೆ. ದೇಶದ ಖಾರಿಫ್ ಬೆಳೆಯ ಉದ್ದು ಉತ್ಪಾದನೆ ಸಾಮಾನ್ಯವಾಗಿ 13ಲಕ್ಷ ಟನ್‌ಗಳಾಗಿದ್ದು ಈ ವರ್ಷ 10.7 ಲಕ್ಷಟನ್‌ಗಳಾಗಿವೆಯೆನ್ನಲಾಗಿದೆ. (ಈ ಹಿಂದಿನ ವರ್ಷ) ಅದರಲ್ಲಿ ದೇಶದ ಮಾರುಕಟ್ಟೆಗೆ ಈವರೆಗಿನ ಆವಕ 4 ಲಕ್ಷಟನ್ ಮಾತ್ರವಾಗಿದ್ದು ಉಳಿದ ದಾಸ್ತಾನು ಏನಾಗಿದೆಯೆಂಬ ಪ್ರಶ್ನೆ ಮೂಡುತ್ತಿದೆಯೆನ್ನಲಾಗಿದೆ.